**<u>ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.62/2020</u>**

ಸರಕಾರದ ಪರವಾಗಿಃ  ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

**ಆರೋಪಿ :** ರವಿ ಹರನಾಳ ತಂದೆ ಶಿವಪ್ಪ ಹರನಾಳ,
21 ವರ್ಷ, ಉಃ ಕೂಲಿ ಕೆಲಸ,
ವಾಸಃ ಅಮೋಗಸಿದ್ದ ಗುಡಿಯ ಹತ್ತಿರ
ಅಫಜಲಪೂರ, ತಾಃ ಅಫಜಲಪೂರ, ಜಿಃ ಕಲಬುರಗಿ.

**<u>ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ  313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರ:1:  ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು  ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2  ಪ್ರಾಸಾ-01 ವಿಠಲ ತಂದೆ ಭಾಗಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ರಿಂದ 6 ರವರ ಪರಿಚಯ ಇರುತ್ತಾರೆ. ತಾನು ಹವಳಗಾ ಗ್ರಾಮದಲ್ಲಿ ಇದ್ದೆ, ತಮ್ಮ ಸಮಾಜದ ವತಿಯಿಂದ ತನಗೆ ದೂರವಾಣಿ ಕರೆ ಮಾಡಿ ಅಫಜಲಪೂರಕ್ಕೆ ಕರೆಯಿಸಿ, ಸಮಾಜದ ವತಿಯಿಂದ ತನಗೆ ಪೋಲಿಸ ಠಾಣೆಗೆ ದೂರು ನೀಡು ಅಂತಾ ತಿಳಿಸಿರುತ್ತಾರೆ. ಅದಕ್ಕಾಗಿ ತಾನು ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆಂದು ಹಾಗೂ ಆ ನಂತರ ಆರೋಪಿತನ ತಂದೆ-ತಾಯಿ ತಮ್ಮ ಬಳಿ ಬಂದು ಆರೋಪಿಯದು ತಪ್ಪಾಗಿರುತ್ತದೆ ಒಂದು ಸಾರಿ ಕ್ಷಮಿಸಿ ಅಂತಾ ವಿನಂತಿಸಿಕೊಂಡಿರುತ್ತಾರೆಂದು ಹಾಗೂ ಅದಕ್ಕಾಗಿ ತಾವು ರಾಜೀ ಆಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3  ಪ್ರಾಸಾ-02 ಸೈದಪ್ಪ ತಂದೆ ಶಿವಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1, ಚಾಸಾ-5 ಮತ್ತು 6 ರವರ ಪರಿಚಯ ಇರುತ್ತಾರೆ. ಈಗ್ಗೆ ಸುಮಾರು 4-5 ವರ್ಷಗಳ ಹಿಂದೆ ಕ್ರಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರ ಮತ್ತು ವಿಜಯಸ್ಥಂಭಕ್ಕೆ ಯಾರೋ ದುಶ್ಕರ್ಮಿಗಳು ಚಪ್ಪಲಿ ಹಾರ ಹಾಕಿರುತ್ತಾರೆ ಎಂದು ತಮಗೆ ತಿಳಿಸಿದ್ದು, ಅದಕ್ಕೆ ತಾವು ಶ್ರೀ ಸಂಗೊಳ್ಳಿ ರಾಯಣ್ಣ ರವರ ಪ್ರತಿಮೆ ಬಳಿ ಹೊದಾಗ ಅಲ್ಲಿ ಯಾವುದೇ ಅವಮಾನ ಮಾಡುವ ಚಪ್ಪಲಿ ಹಾರಗಳು ಇರಲಿಲ್ಲವೆಂದು ಹಾಗೂ ನಂತರ ಚಾಸಾ-1 ರವರು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತಾರೆಂದು ಹಾಗೂ ತನಗೆ ಪೋಲಿಸರು ಸಹಿ ಮಾಡು ಅಂತಾ ಹೇಳಿದ್ದರಿಂದ ತಾನು ಸಹಿ ಮಾಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 4 ಪ್ರಾಸಾ-06 ಮಹೇಶ ತಂದೆ ಮಹಾಂತಪ್ಪ ಚಾಲಕ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1, ಚಾಸಾ-4 ಮತ್ತು 5 ರವರ ಪರಿಚಯ ಇರುತ್ತದೆ. ಅಫಜಲಪೂರದ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಇರುವ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ನ್ಯಾಯಾಲಯದ ಮುಂದೆ ಇರುವ ಆರೋಪಿತನು ಸಂಗೊಳ್ಳಿ ರಾಯಣ್ಣ ರವರಿಗೆ ಅವಮಾನ ಮಾಡುವ ಉದ್ದೇಶದಿಂದ ಭಾವಚಿತ್ರಕ್ಕೆ ಚಪ್ಪಲಿ ಮತ್ತು ಶಾಲಾ ಮಕ್ಕಳ ಬೂಟುಗಳನ್ನು ಹಾಕಿರುತ್ತಾನೆಂದು ಹಾಗೂ ತಾವು ಸದರಿ ವಿಷಯವನ್ನು ಖಂಡಿಸಿ ಹೋರಾಟ ಮಾಡಿ ಪೋಲಿಸರಿಗೆ ದೂರು ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 5 ಪ್ರಾಸಾ-07 ಸಂತೋಷ ತಂದೆ ಲಿಂಗಶೆಟ್ಟಿ ಸಿ.ಪಿ.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 01.11.2019 ರಂದು ಚಾಸಾ-7 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆಂದು ಹಾಗೂ ದಿನಾಂಕಃ 06.12.2019 ರಂದು ಈ ಪ್ರಕರಣದ ತನಿಖೆ ಪೂರ್ಣಗೊಂಡಿದರಿಂದ ಅಂತಿಮ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-6 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-7 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ

(ಆರೋಪಿತನ ಹೇಳಿಕೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 07.03.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.